ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು

C.C. No.4461/2024. Pw1.

ದಿನಾಂಕ:**23.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು:- ಆರೋಪಿ ಪರ ವಕೀಲರಿಂದ:-

ನಾನು ವ್ಯವಸಾಯ ಮತ್ತು ಮ್ಯಾಕಾನಿಕ್ ಕೆಲಸ ಮಾಡುತ್ತೇನೆ. ನನಗೆ 5 ಎಕರೆ ಜಮೀನು ಇದ್ದು, ಸದರಿ ಸರ್ವೆ ನಂ.69/4, 69/5, 72/3 ಆಗಿದೆ. ನನ್ನ ಮನೆಯಲ್ಲಿ 4 ಜನರಿದ್ದಾರೆ. ನಮ್ಮ ಮನೆಯಲ್ಲಿ ನಾನು ಒಬ್ಬನೇ ವ್ಯವಹಾರ ಮಾಡುತ್ತೇನೆ. ನನ್ನ ಪತ್ನಿ ಯಮುನಾ, ಅವರು ಗೃಹಿಣಿ.

ನನಗೆ ಆರೋಪಿ 10 ವರ್ಷದಿಂದ ಪರಿಚಯವಿದ್ದಾರೆ. ಆರೋಪಿಯು ಬ್ಯಾಂಕಿಗೆ ಬರುತ್ತಿದ್ದಾಗ ಮತ್ತು ಅವರ ತಂದೆಯೊಂದಿಗೆ ಕೆಲಸಕ್ಕೆ ಬರುತ್ತಿದ್ದು ಪರಿಚಯವಾಗಿರುತ್ತಾರೆ. ನಮ್ಮ ಮತ್ತು ಆರೋಪಿ ಊರಿನ ನಡುವೆ 5 ಕಿ ಮೀ ಅಂತರವಿದೆ. ನಾನು 3 ಬ್ಯಾಂಕ್ ಹೊಂದಿದ್ದೇನೆ, ಡಿಸಿಸಿ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಕರ್ನಾಟಕ ಬ್ಯಾಂಕ್ ಆಗಿದೆ. ನನ್ನ ಖಾತೆಗೆ ಹೊಂದಿಕೆ ಯಾಗಿರುವ ಫೋನ್ ಸಂಖ್ಯೆ 8861943753. ಅದರಲ್ಲಿ ಫೋನ್ ಪೇ ಗೂಗಲ್ ಪೇ ಇದೆ. ನಾನು ಆರೋಪಿಗೆ ನೀಡಿದ 6 ಲಕ್ಷ ಆದಾಯವು ತರಕಾರಿ ಬೆಳೆ, ತೆಂಗಿನ ತೋಟದ ಆದಾಯ ಮತ್ತು ಮ್ಯಾಕಾನಿಕ್ ಕೆಲಸದಿಂದ ಬಂದಿದೆ. ನನ್ನ ವಾರ್ಷಿಕ ಆದಾಯ 7-8 ಲಕ್ಷ ಇದೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ನಾನು ಆರೋಪಿಗೆ ನಗಧು ರೂಪದಲ್ಲಿ ಹಣ ನೀಡಿದ್ದೇನೆ. ಸದರಿ 6 ಲಕ್ಷವನ್ನು ಚೆಕ್ ಅಥಾವ ಖಾತೆ ಮೂಲಕ ವರ್ಗಾಹಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಗದು ಇದ್ದದ್ದರಿಂದ ನಗದು ನೀಡಿರುತ್ತೇನೆ ಎನ್ನುತ್ತಾರೆ.

ಆರೋಪಿ ಹೊರತು ಪಡಿಸಿ ಮೆತ್ತೊಬ್ಬರ ವಿರುದ್ಧ ಚೆಕ್ ಬೌನ್ ಪ್ರಕರಣ ದಾಖಲಸಿರುತ್ತೇನೆ, ಸದರಿಯು ಇದೇ ನ್ಯಾಯಾಲಯದಲ್ಲಿ ಇದೆ, ಸದರಿ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣ ನೀಡಿದ್ದಾಗ ಬೇರೆ ಯಾರು ಇರಲಿಲ್ಲ. ಸದರಿ ಹಣವನ್ನು ಮತ್ತಿಘಟ್ಟದ ಬ್ಯಾಂಕ್ ಆಫ್ ಬಾರೋಡಾದ ಬಳಿ ನೀಡಿರುತ್ತೇನೆ. ನಾನು ಆರೋಪಿಗೆ 1 ತಿಂಗಳ ಕಾಲ ಕಾಲವಕಾಶ ನೀಡಿದ್ದೆ. ಬಡ್ಡಿ ಮಾತುಕತೆಯಾಗಿಲ್ಲ. ವಿವಾದಿತ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಕರಾರು ಮಾಡಿಕೊಂಡಿಲ್ಲ ಸಾಕ್ಷಿಯು ಚೆಕ್

ನೀಡಿದ್ದಾರೆ ಎನ್ನುತ್ತಾರೆ.

ನಾನು ಹೆಚ್ಚಾಗಿ ಬ್ಯಾಂಕ್ ಆಫ್ ಬರೋಡಾದಲ್ಲಿ ವ್ಯವಹಾರ ಮಾಡುತ್ತೇನೆ. ಆರೋಪಿಯು ಲೋನ್ ನವೀಕರಿಸಬೇಕೆಂದು ಸಾಲ ಬೇಕೆಂದು ಕೇಳಿದ್ದರು. ವಕೀಲರ ನೋಟೀಸಿನಲ್ಲಿಯೂ ಸದರಿ ವಿಚಾರ ಹೇಳಿರುತ್ತೇನೆ. ನನ್ನ ಪತ್ನಿಗೂ ಕೂಡ ಬ್ಯಾಂಕ್ ಖಾತೆ ಇದೆ, ಅವರು ಬ್ಯಾಂಕ್ ಆಫ್ ಬರೋಡಾ ಮತ್ತು ಅಂಚೆ ಕಛೇರಿಯಲ್ಲಿ ಖಾತೆ ಹೊಂದಿದ್ದಾರೆ. ಸದರಿಯವರು ಫೋನ್ ಪೇ ಹೊಂದಿದ್ದಾರೆ ಗೂಗಲ್ ಪೇ ಹೊಂದಿದ್ದಾರೆ. ನನಗೆ ಬರಬೇಕಾದ ಹಣವನ್ನು ನನ್ನ ಹೆಂಡತಿಯ ಖಾತೆಗೂ ಕೂಡ ಹಾಕಿಸಿಕೊಳ್ಳುತ್ತೇನೆ ಎಂದರೆ ಸಾಕ್ಷಿಯು ಸು.5 ರಿಂದ 10 ಸಾವಿರ ಮಾತ್ರ ಆ ರೀತಿ ವರ್ಗಾಹಿಸಿಕೊಳ್ಳುತ್ತೇನೆ ಎನ್ನುತ್ತಾರೆ. ನನ್ನ ಹೆಂಡತಿಯ ಬ್ಯಾಂಕ್ ಖಾತೆಯ ಪಾಸ್ ಪುಸ್ತಕ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಪತ್ನಿ ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.

ಆರೋಪಿಯು 6 ಲಕ್ಷದಲ್ಲಿ ದಿ:07.07.2026 ರಂದು ರೂ.50 ಸಾವಿರ ನೀಡಿರುತ್ತಾರೆ. ಸದರಿ ಹಣವನ್ನು ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದಾಗಲೇ ಕೊಡಲಾಗಿದೆ ಎಂದರೆ ಸರಿ. ಸಾಕ್ಷಿಯು ಉಳಿಕೆ ಹಣ ನೀಡುವುದಾಗಿ ಹೇಳಿ ನ್ಯಾಯಾಲಯದ ಮುಂದೆಯೇ ರೂ.50 ಸಾವಿರ ನೀಡಿರುತ್ತಾರೆ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.